ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE ● AFFILIATED TO BANGALORE UNIVERSITY ● AICTE APPROVED ● 2(F) & 12 (B) RECOGNITION OF UGC ● ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – APRIL/MAY 2026

## KANNADA - IV SEMESTER BBA AVIATION

## 25BBA41KB: ಗಗನಯಾನ ನಿರ್ವಹಣಾ ಕನ್ನಡ IV

**Time: 3 Hours.** **Max. Marks: 80**

**I. ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (200 ಪದಗಳಿಗೆ ಮೀರದಂತೆ)** **3x10=30**

1. "ಮೊಸರಿನ ಮಂಗಮ್ಮ" ಕಥೆಯಲ್ಲಿ ಮಂಗಮ್ಮ ಬದುಕನ್ನು ಗ್ರಹಿಸಿದ ರೀತಿ ಎಂತಹದು? ವಿಶ್ಲೇಷಿಸಿ.
2. ಸಾಮಾಜಿಕ ಮೌಲ್ಯಗಳ ಅಧಃಪತನಕ್ಕೆ ಕಾರಣವೇನು? ವಿವರಿಸಿ.
3. ಸಮಾಸ ಎಂದರೇನು? ಯಾವುದಾದರೂ ಐದು ಸಮಾಸಗಳನ್ನು ಉದಾಹರಣೆಯೊಂದಿಗೆ ವಿವರಿಸಿ.
4. ವಿಮಾನ ನಿರ್ಮಾಣ ಮತ್ತು ಬಡಜನತೆಯ ಅಭಿವೃದ್ಧಿ ಇವುಗಳ ಅಂತಃಸಂಬಂಧಗಳನ್ನು ಕುರಿತು ಲೇಖನದ ಹಿನ್ನಲೆಯಲ್ಲಿ ವಿವರಿಸಿ.

**II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ)** **4x5=20**

1. ರೊಟ್ಟಿ ಮತ್ತು ಕೋವಿ ಇವುಗಳಲ್ಲಿ ಯಾವುದು ಅಗತ್ಯ? ಏಕೆ? ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.
2. ಸಮಾಜದ ಬದಲಾವಣೆಗೆ ಯುವಕರ ಪಾತ್ರವೇನು? ವಿಶದಪಡಿಸಿ.
3. ಸ್ವಚ್ಛ ಭಾರತ್ ಮಿಷನ್‌ನ ಉದ್ದೇಶಗಳನ್ನು ತಿಳಿಸಿ.
4. ಗ್ರಾಮೀಣ ನೈರ್ಮಲ್ಯದ ಪರಿಕಲ್ಪನೆಯನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.
5. ಬಾಹ್ಯಾಕಾಶ ಸಂಶೋಧನೆಯಲ್ಲಿ ರಷ್ಯಾದ ಸಾಧನೆಯನ್ನು ಕುರಿತು ಬರೆಯಿರಿ.
6. ಗಗನನೌಕೆಯ ನಿರ್ವಹಣೆ ಮತ್ತು ಗಗನಯಾನದ ಮುಖ್ಯಾಂಶಗಳನ್ನು ವಿವರಿಸಿ.

**III. ಕೆಳಕಂಡ ಗದ್ಯ ಕಂಡಿಕೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿ.** **1x5=5**

ಎಲ್ಲ ಪ್ರಯೋಗಗಳು ಯಶಸ್ವಿಯಾದ ನಂತರ ವಿಮಾನ ವಿಜ್ಞಾನಿಗಳ ಮುಂದಿನ ಗುರಿ ಕಿವಿಗಡಚಿಕ್ಕುವ ಸದ್ದು ಮಾಡದಂಥ ವಿಮಾನಗಳ ಸೃಷ್ಟಿ, ಇದು ಸಾಧ್ಯವೆ? ಎಂಬ ಅನುಮಾನ ನಿಮಗೊಬ್ಬರಿಗೇ ಅಲ್ಲ, ನಮ್ಮೆಲ್ಲರಿಗಿಂತಲೂ ಬುದ್ಧಿವಂತರಾದ ವಿಮಾನ ವಿಜ್ಞಾನಿಗಳಿಗೂ ಇದೆ. ಸದ್ಯಕ್ಕೆ ಇದೊಂದು ಕೋಟ್ಯಂತರ ಡಾಲರ್‌ಗಳ ಪ್ರಶ್ನೆ, ಸೂಪರ್ ಸಾನಿಕ್ ವಿಮಾನಗಳು ಬಾಂಬಿನಂತೆ ತೂರುವ 'ಸಾನಿಕ್ ಬೂಮ್'ಗಳಿಂದ ನಿಮ್ಮ ಕಿವಿಗಳನ್ನು ಸಾಧ್ಯವಾದಷ್ಟು ರಕ್ಷಿಸಲು ಇಷ್ಟೇ ಹಣ ವೆಚ್ಚವಾಗುತ್ತಿದೆ.

**IV. ಎಬಿಸಿ ಕಂಪನಿಯಲ್ಲಿನ ಮ್ಯಾನೇಜರ್ ಹುದ್ದೆಗೆ ಅಭ್ಯರ್ಥನ ಪತ್ರ ತಯಾರಿಸಿ.** **1x5=5**

**V. ಕೆಳಕಂಡ ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿರಿ** **1x5=5**

ಸನ್ನಿವೇಶ: ಆಕಾಶದಲ್ಲಿ ಹಾರಾಡುತ್ತಿರುವ ಹಕ್ಕಿಗಳನ್ನು ನೋಡುತ್ತಿರುವ ಹುಡುಗ.

ST. FRANCIS DE SALES COLLEGE ELECTRONICS CITY, BENGALURU

**VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ.** 1x5=5

ಮಾರನೆಯ ದಿನ ಮಂಗಮ್ಮ ನನಗೆ ಇದನ್ನು ಹೇಳಿದಳು. ಇತರರು ಹೀಗೆ ಹೇಳುವುದಲ್ಲದೆ ಆ ಸೊಸೆಯಾದವಳು ಮಂಗಮ್ಮ ಕೇಳುವ ಹಾಗೆ ಇತರರೊಂದಿಗೆ "ಸೊಸೆಗೆ ಒಂದು ರವಿಕೆ ಹೊಲಿಸಲಾರದೆ, ಅತ್ತೆ ಬೇರೆ ಸಂಸಾರ ಆಗಿ, ಜಾಕೀಟು ಹಾಕಿರೋದ ನೋಡಿ' ಅಂದಳಂತೆ. ಮಂಗಮ್ಮ ಸೊಸೆಗೆ ಮದುವೆಯಲ್ಲಿ ಓಲೆ, ಕಡಗ, ಚಳ ತುಂಬು, ಜಿಮಿಕೆ, ನಾಗರ, ಕಂಠಿ, ಡಾಬು, ಇದಿಷ್ಟನ್ನು ಕೊಟ್ಟಿದ್ದಳು. ಆಮೇಲೆ ವರುಷಕ್ಕೆ ಒಂದು ಏನಾದರೂ ಒಡವೆ ತೆಗೆದುಕೊಟ್ಟಿದ್ದಳು.

**VII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** 10x1=10

1. ಮಂಗಮ್ಮ ತನಗಾಗಿ ಏನನ್ನು ಖರೀದಿಸುತ್ತಾಳೆ?

   ಅ. ಮಕಮಲ್ ಜಾಕೀಟು ಆ. ಸೀರೆ ಇ. ಚಿನ್ನದ ಬಳೆ ಈ. ಚಪ್ಪಲಿ

2. ಪಟ್ಟಣದಲ್ಲಿ ಮೊಸರು ಕೊಳ್ಳುತ್ತಿದ್ದವರು ಯಾರು?

   ಅ. ನಂಜಮ್ಮ ಆ. ತಂಗಮ್ಮ ಇ. ಕೆಂಪಮ್ಮ ಈ. ಮಂಜಮ್ಮ

3. 12ನೇ ಶತಮಾನದ ಕ್ರಾಂತಿಕಾರಿ ಎಂದು ಯಾರನ್ನು ಕರೆಯುತ್ತಾರೆ?

   ಅ. ಬಸವಣ್ಣ ಆ. ದೇವರ ದಾಸಿಮಯ್ಯ ಇ. ಅಲ್ಲಮಪ್ರಭು ಈ. ಚನ್ನಬಸವಣ್ಣ

4. ಕಸವರ ಎಂದರೆ

   ಅ. ಚಿನ್ನ ಆ. ಬೆಳ್ಳಿ ಇ. ತಾಮ್ರ ಈ. ವಜ್ರ

5. ಪರಿಸರವಾದಿಗಳ ಕಿವಿ ಕೆಂಪಾಗಿಸಿದ್ದ ವಿಮಾನ ಯಾವುದು?

   ಅ. ಕನ್‌ಕಾರ್ಡ್ ಆ. ತೇಜಸ್ ಇ. ಮಿಗ್-21 ಈ. ಎಫ್-5

6. ಸ್ವಚ್ಛ ಭಾರತ್ ಮಿಷನ್ ಯೋಜನೆ ಪ್ರಾರಂಭವಾದ ವರ್ಷ?

   ಅ. 2012 ಆ. 2014 ಇ. 2017 ಈ. 2015

7. "ಬಿಳಿಕುದುರೆ" ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?

   ಅ. ದ್ವಿಗು ಸಮಾಸ ಆ. ಕರ್ಮಧಾರಯ ಸಮಾಸ ಇ. ಕ್ರಿಯಾ ಸಮಾಸ ಈ. ಅಂಶಿ ಸಮಾಸ

8. ಭಾರತದ ಗಗನಯಾತ್ರಿಗಳು ತರಬೇತಿ ಪಡೆಯುತ್ತಿರುವ ದೇಶ ಯಾವುದು?

   ಅ. ಅಮೆರಿಕಾ ಆ. ರಷ್ಯಾ ಇ. ಕೆನಡ ಈ. ಜರ್ಮನಿ

9. "ರೊಟ್ಟಿ ಮತ್ತು ಕೋವಿ" ಕವಿತೆಯ ಕರ್ತೃ.

   ಅ. ಜಿ. ಎಸ್. ಶಿವರುದ್ರಪ್ಪ ಇ. ಸು. ರಂ. ಎಕ್ಕುಂಡಿ

   ಇ. ಎಚ್. ಎಸ್. ಶಿವಪ್ರಕಾಶ್ ಈ. ಎಚ್. ಎಲ್. ಪುಷ್ಪಾ

10. ಭಾರತದ ಮಾನವ ಸಹಿತ ಗಗನಯಾನ ಯಾವ ವರ್ಷ ನಡೆಯಿತು?

    ಅ. 2021 ಆ. 2023 ಇ. 2022 ಈ. 2020

***********

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU